ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಅಪೆಕ್ಸ್ ಬ್ಯಾಂಕ್

376 - ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಪ್ರತಿ ಜಿಲ್ಲೆಯಲ್ಲೂ ಸಹಕಾರಿ ಅಪೆಕ್ಸ್ ಬ್ಯಾಂಕ್‌ನ ಶಾಖೆಗಳನ್ನು ತೆರೆಯುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಎಸ್.ಆರ್. ಮೋರೆ (ಸಹಕಾರ ಸಚಿವರು) :

ಅ) ಇಲ್ಲ

ಆ) ಎಲ್ಲಾ ಜಿಲ್ಲೆಗಳಲ್ಲೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಇದ್ದು ಇವು ಸಹಕಾರ ಕ್ಷೇತ್ರದಲ್ಲಿ ಬ್ಯಾಂಕಿನ ಚಟುವಟಿಕೆಗಳನ್ನು ನೋಡಿಕೊಳ್ಳುತ್ತಿರುವುದರಿಂದ ಪ್ರತಿ ಜಿಲ್ಲೆಯಲ್ಲೂ ಅಪೆಕ್ಸ್ ಬ್ಯಾಂಕಿನ ಶಾಖೆ ತೆರೆಯುವ ಉದ್ದೇಶವಿಲ್ಲ.

ರಾಜ್ಯದಲ್ಲಿ ಅಲ್ಪಸಂಖ್ಯಾತರ ಮತ್ತು ಭಾಷಾ ಅಲ್ಪ ಸಂಖ್ಯಾತರ ಶಿಕ್ಷಣ ಸಂಸ್ಥೆಗಳು

407 - ಶ್ರೀ. ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಅಲ್ಪಸಂಖ್ಯಾತರ ಮತ್ತು ಭಾಷಾ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳೆಷ್ಟು?
(ವಿವರ ನೀಡುವುದು)

ಆ) ಅವುಗಳ ಪೈಕಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಸಂಸ್ಥೆಗಳೆಷ್ಟು?

ಇ) ಉಡುಪಿ ತಾಲ್ಲೂಕು ಶ್ರೀ ನಾರಾಯಣ ಗುರು ಎಜುಕೇಷನ್ ಟ್ರಸ್ಟ್ (ರಿ) ಇವರು ತುಳು ಭಾಷಾ ಮೈನಾರಿಟಿ ಟ್ರಸ್ಟ್ ಎಂದು ಘೋಷಿಸಲು ಸಲ್ಲಿಸಿದ ಅರ್ಜಿಯ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು) :

ಅ) 74 - ಪಟ್ಟಿ ಲಗತ್ತಿಸಿದೆ.

ಆ) 20

ಇ) ತುಳು ಭಾಷೆಯನ್ನು ಭಾಷಾ ಅಲ್ಪಸಂಖ್ಯಾತರ ಪಟ್ಟಿಯಲ್ಲಿ ಸೇರಿಸಿಲ್ಲವಾದ ಕಾರಣ ಈ ಸಂಸ್ಥೆಯನ್ನು ಭಾಷಾ ಅಲ್ಪ ಸಂಖ್ಯಾತರು ನಡೆಸುತ್ತಿರುವ ಶಾಲೆ ಎಂದು ಘೋಷಿಸಲಾಗಿಲ್ಲ.

ಭಾಷಾ : ಮತೀಯ ಅಲ್ಪಸಂಖ್ಯಾತರ ಸಂಸ್ಥೆಗಳ ಪಟ್ಟಿ

1. ಅಲ್ಲರ್ದ ಎಜುಕೇಷನ್ ಸೊಸೈಟಿ ವಿಲ್ಸ ಬೋರೋಮಿಯೋ, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು.
2. ತೆರೇಸಿಯ ಕಾರ್ಮೆಲ್ ಎಜುಕೇಶನ್ ಸೊಸೈಟಿ, ಕಿರಿಯ ಪ್ರಾಥಮಿಕ ಶಾಲೆ.
3. ತೆರೆಸ ಕಾರ್ಮೆಲ್ ವಿದ್ಯಾಸಂಸ್ಥೆ, ಮೈಸೂರು.
4. ಅಲಾರ್ಟ್ ಎಜುಕೇಶನ್ ಸೊಸೈಟಿ ವಿಲ್ಲಾಬೋರೋ ವಿದಾತೋ, ಬೆಂಗಳೂರು.

5. ದಿ ಆಫ್‌ಸ್ಟಾಲಿಕ್ ಕಾರ್ಮೆಲ್ ಎಜುಕೇಶನ್ ಸೊಸೈಟಿ ಆಫ್ ಮೈಸೂರು ಸ್ಟೇಟ್ ಅನ್ಸ್ ಕಾನ್ವೆಂಟ್, ಮಂಗಳೂರು.
6. ಆಫ್‌ಸ್ಟಾಲಿಕ್ ಎಜುಕೇಶನ್ ಸೊಸೈಟಿ, ಕರ್ನಾಟಕ ರಾಜ್ಯ, ಮಂಗಳೂರು.
7. ದಿ ಕ್ಯಾಥೋಲಿಕ್ ಬೋರ್ಡ್ ಆಫ್ ಎಜುಕೇಶನ್ ಆಫ್ ದಿ ಡಯೋಸಿನ್ ಆಫ್, ಮಂಗಳೂರು.
8. ಸಿಸ್ಟರ್ ಆಫ್ ಚಾರಿಟಿ ಎಜುಕೇಶನ್ ಸೊಸೈಟಿ, ಮಂಗಳೂರು.
9. ಮಂಗಳೂರು ಡಯೋಸಿಸನ್ ಕ್ಯಾಥೋಲಿಕ್ ಬೋರ್ಡ್ ಆಫ್ ಎಜುಕೇಶನ್, ಮಂಗಳೂರು.
10. ಕರ್ನಾಟಕ ಕ್ಯಾಥೋಲಿಕ್ ಎಜುಕೇಶನ್ ಅಂಡ್ ಚಾರಿಟಬಲ್ ಸೊಸೈಟಿ, ಶಿರಾಡಿ ಮಂಗಳೂರು.
11. ಮಂಗಳೂರು ಡಯಾಸಿಸನ್ ಕ್ಯಾಥೋಲಿಕ್ ಬೋರ್ಡ್ ಆಫ್ ಎಜುಕೇಶನ್ ಮಂಗಳೂರು.
12. ದಿ ಸಿಸ್ಟರ್ಸ್ ಆಫ್ ಚಾರಿಟಿ ಎಜುಕೇಶನ್ ಸೊಸೈಟಿ, ಮಂಗಳೂರು.
13. ಚಿಕ್ಕಮಗಳೂರು ಬಿಷಪ್ಪರ ಶಿಕ್ಷಣ ಸಂಸ್ಥೆ, ಚಿಕ್ಕಮಗಳೂರು.
14. ಉರ್ಸಲಿನ್ ಫ್ರಾನ್ಸಿಸಿಯನ್ ಎಜುಕೇಶನ್ ಸೊಸೈಟಿ, ಮಂಗಳೂರು.
15. ಮಂಗಳೂರು ಉರ್ಸಲಿನ್ ಸಿಸ್ಟರ್ಸ್ ಆಫ್ ಮೇರಿ ಇನ್ಮ್ಯಾಕ್ಯುಲೇಟ್ ಎಜುಕೇಶನ್ ಸೊಸೈಟಿ, ಮಂಗಳೂರು.
16. ಮಾರ್ಗರೇಟ್ ಎಜುಕೇಶನ್ ಮತ್ತು ಕಲ್ಚರಲ್ ಸೊಸೈಟಿ ಚಾಮರಾಜ ಪೇಟೆ, ಬೆಂಗಳೂರು.
17. ಚಿಕ್ಕಮಗಳೂರು ಸಂತ ಜೋಸೆಫರ್ ಎಜುಕೇಶನ್ ಸೊಸೈಟಿ, ಚಿಕ್ಕಮಗಳೂರು.
18. ಬೆಂಗಳೂರು ಹೈಸ್ಕೂಲ್ ಎಜುಕೇಶನ್ ಸೊಸೈಟಿ ಮತ್ತು ಮಂಗಳೂರಿನ ಹೈಸ್ಕೂಲ್ ಎಜುಕೇಶನ್ ಸೊಸೈಟಿ.
19. ಬೆಂಗಳೂರು ಸಂತ ಅನ್ನೀಸ್ ಎಜುಕೇಶನ್ ಸೊಸೈಟಿ, ಬೆಂಗಳೂರು.
20. ಕ್ರೈಸ್ಟ್ ಕಾಲೇಜ್ ಸೊಸೈಟಿ, ಧರ್ಮಾರಾಮರ್ ಕಾಲೇಜ್, ಬೆಂಗಳೂರು.
21. ಬೈಲೂರು ಎಂ.ಎಂ.ಎಡೆಡ್ ಹೈಯರ್ ಪ್ರಾ.ಸ್ಕೂಲ್ 76 ಬಡಗಬೆಟ್ಟು, ಬೈಲೂರು, ಉಡುಪಿ.
22. ಸೈಂಟ್ ಅನ್ಸ್ ಎಜುಕೇಶನ್ ಸೊಸೈಟಿ, ನಂ. 4 : ಮಿಲ್ ರಸ್ತೆ, ಬೆಂಗಳೂರು.
23. ಕರ್ನಾಟಕ ಜೆಸೂಟ್ ಎಜುಕೇಶನ್ ಸೊಸೈಟಿ, ಸೈಂಟ್ ಜೋಸೆಫ್ ಕಾಲೇಜ್, ಬೆಂಗಳೂರು.
24. ಶ್ರೀ ಶ್ರವಣಬೆಳಗೊಳ ದಿಗಂಬರ ಜೈನ ಜ್ಞಾನ ಪ್ರಸಾರಕ ಸಂಘ, ಶ್ರವಣಬೆಳಗೊಳ.
25. ಶ್ರೀ ಬುಜಬಲಿ ಬ್ರಹ್ಮಚರ್ಯ ಆಶ್ರಮ (ರಿ) ಹಿರಿಯಂಗಡಿ, ಕಾರ್ಕಳ.
26. ಗುಡ್ ನ್ಯೂಸ್ ವೆಲ್ ಫೇರ್ ಸೊಸೈಟಿ, ತುಮಕೂರು ಕಲಘಟಗಿ.
27. ರಾವ್ ಬಹಾದ್ದೂರ್ ಬಿ.ಪಿ. ಅಣ್ಣಾಸ್ವಾಮಿ ಮೊದಲಿಯಾರ್ ಹಿರಿಯ ಪ್ರಾಥಮಿಕ ಶಾಲೆ ಪ್ರೆಜರ್‌ಟೌನ್, ಬೆಂಗಳೂರು.
28. ಅಂಜುಮಾನ್ ಇಸ್ಲಾಮಿಯ ಹರಿಹರ

29. ಅಂಜುಮಾನ್ ಹೋಮಿ ಇ ಮುಸ್ಲಿಮಾನ್ ಭಟ್ಕಳ ಉತ್ತರ ಕನ್ನಡ ಜಿಲ್ಲೆ.
30. ಹಿಲಾಲ್ ಎಜುಕೇಶನ್ ಸೊಸೈಟಿ, ಚಿಕ್ಕಬಳ್ಳಾಪುರ.
31. ಅಲ್ ಸಿರಾಜ್ ಶಿಕ್ಷಣ ಸಂಸ್ಥೆ ಮನಹಳ್ಳಿ ತಾಲ್ಲೂಕು, ಬೀದರ್ ಜಿಲ್ಲೆ.
32. ಅಲ್ ಮಹಮದ್ ಎಜುಕೇಶನ್ ಸೊಸೈಟಿ, ಭದ್ರಾವತಿ.
33. ಮುಸ್ಲಿಂ ಎಜುಕೇಶನ್ ಸೊಸೈಟಿ ಮುರುಡೇಶ್ವರ, ಉತ್ತರ ಕನ್ನಡ ಜಿಲ್ಲೆ.
34. ಹಿಮಾಯತುಲ್ ಇಸ್ಲಾಮ್ ಸಂಘ (ರಿ) ಪಡುಬಿದ್ರಿ, ದಕ್ಷಿಣ ಕನ್ನಡ
35. ಜಿಲ್ಲಾ ಮುಸ್ಲಿಂ ವೆಲ್ಫೇರ್ ಮತ್ತು ಶಿಕ್ಷಕರ ಸಂಸ್ಥೆ ಕುಕ್ಕೇರಿ.
36. ಐಡಿಯಲ್ ಎಜುಕೇಶನ್ ಸೊಸೈಟಿ, ಐಡಿಯಲ್ ಜೂನಿಯರ್ ಕಾಲೇಜ್, ಚಿತ್ರದುರ್ಗ.
37. ವಿಲ್ಲತ್ ಎಜುಕೇಶನ್ ಸೊಸೈಟಿ ಮತ್ತು ವಿಜೇತ್ ಸೊಸೈಟಿ, ಪದವಿ ಪೂರ್ವ ಶಿಕ್ಷಣ ಸಂಸ್ಥೆ, ದಾವಣಗೆರೆ.
38. ಅಲ್ ಹಸನತ್ ವಿದ್ಯಾ ಸಂಸ್ಥೆ, ವಿಜಾಪುರ.
39. ಮಲ್ಲಿಕ್ ಎಜುಕೇಶನ್ ಸೊಸೈಟಿ, ಶಿವಮೊಗ್ಗ
40. ಉರ್ದು ಎಜುಕೇಶನ್ ಸೊಸೈಟಿ, ಜೀವರ್ಗಿ, ಗುಲ್ಬರ್ಗ
41. ತಾಹಿದ್ ವಿಲ್ಲತ್ ಮುಸ್ಲಿಂ ವೆಲ್ಫೇರ್ ಅಸೋಸಿಯೇಶನ್ ಸಂಸ್ಥೆ.
42. ಶ್ರವಣಬೆಳಗೊಳ ದಿಗಂಬರ ಜೈನ ಜ್ಞಾನ ಪ್ರಚಾರಕ ಸಂಘ
43. ಸ್ವಸ್ತಿಶ್ರೀ ನೇಮಿಸಾಗರ ವರ್ಣೀಜಿ ಪ್ರೌಢಶಾಲೆ ಹಿರಿಯಂಗಡಿ ಮತೀಯ ಅಲ್ಪ ಸಂಖ್ಯಾತ ಶಾಲೆ.
44. ಮೆಥೋಡಿಸ್ಟ ಬಾಲಕಿಯರ ಪದವಿ ಪೂರ್ವ ಕಾಲೇಜು, ಕೋಲಾರ.
45. ಜ್ವಾಲಾಮಾಲಿನಿ ಬಾಲಕಿಯರ ಪ್ರೌಢಶಾಲೆ, ಸಿಂಹಗದ್ದೆ ಬಸ್ತಿಪುರ ನರಸಿಂಹರಾಜಪುರ, ಚಿಕ್ಕಮಗಳೂರು ಜಿಲ್ಲೆ.
46. ಕಲಾ ಮತ್ತು ವಾಣಿಜ್ಯ ಗುಡ್ ನ್ಯೂಸ್ ಸ್ವತಂತ್ರ ಕಿರಿಯ ಕಾಲೇಜು.
47. ಆರ್.ಬಿ.ಎ.ಎನ್.ಎಂ. ವಿದ್ಯಾ ಸಂಸ್ಥೆ, ಬೆಂಗಳೂರು
    (1) ಹೈಸ್ಕೂಲ್ (ಮೈನ್) ಬೆಂಗಳೂರು.
    (2) ಹೈಸ್ಕೂಲ್ (ಚೀಪ್) ಬೆಂಗಳೂರು.
    (3) ಬಾಯ್ಸ್ ಮಿಡಲ್ ಸ್ಕೂಲ್, ಬೆಂಗಳೂರು.
    (4) ಸಿ.ವಿ.ಎನ್.ಸುಬಾ ಸೀನಿಯರ್ ಪ್ರಾಥಮಿಕ ಶಾಲೆ, ಬೆಂಗಳೂರು.
    (5) ತಿರುವೇಲತ್ತೂರು ಪ್ರಾಥಮಿಕ ಶಾಲೆ, ಕನ್ ಟೋನ್ ಮೆಂಟ್, ಬೆಂಗಳೂರು.
    (6) ಗೋವಿಂದಮ್ಮಾಳ್ ಗರ್ಲ್ಸ್ ಪ್ರಾಥಮಿಕ ಶಾಲೆ, ಬೆಂಗಳೂರು.
    (7) ತಿರುಕುಳತ್ತೂರ್ ಪ್ರಾಥಮಿಕ ಶಾಲೆ, ಅಲಸೂರು
48. ವಿಜಯನಗರ ಎಜುಕೇಶನ್ ಟ್ರಸ್ಟ್, ಬೆಂಗಳೂರು
49. ರಫಿಹುಲ್ ಮುಸ್ಲಿಮೀನ್ ಎಜುಕೇಶನ್ ಟ್ರಸ್ಟ್ ಮೈಸೂರು.
50. ಪೀಪಲ್ಸ್ ಸರ್ವೀಸ್ ಸೆಂಟರ್, ಹೆಣ್ಣುಮಕ್ಕಳ ಪ್ರೌಢಶಾಲೆ, ದೇವರಜೀವನಹಳ್ಳಿ, ಬೆಂಗಳೂರು.
51. ಮುಸ್ಲಿಂ ಎಜುಕೇಶನ್ ಸೊಸೈಟಿ, ದಾಂಡೇಲಿ, ಉತ್ತರ ಕನ್ನಡ
52. ದೀಪ್ತಿ ಪ್ರೌಢಶಾಲೆ, ನರಸಿಂಹರಾಜಪುರ, ಚಿಕ್ಕಮಗಳೂರು ಜಿಲ್ಲೆ.

53. ಇಂದಿರಾನಗರ ಪ್ರಾಥಮಿಕ ಶಾಲೆ, ಕುಕ್ಕಿಕಟ್ಟೆ, ಉಡುಪಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
54. ಅಫಜಲ್ ಎಜುಕೇಶನ್ ಸೊಸೈಟಿ, ಬಂಗಾರಪೇಟೆ, ಕೋಲಾರ ಜಿಲ್ಲೆ.
55. ಮಿಲಾತ್ ಎಜುಕೇಶನ್ ಸೊಸೈಟಿ, ಬೀದರ್.
56. ಸಿಸ್ಟರ್ ಆಫ್ ಚಾರಿಟಿ ಎಜುಕೇಶನ್ ಸೊಸೈಟಿ, ಕಪಿತಾನಿಯ ಶಿಕ್ಷಕರ ತರಬೇತಿ ಕೇಂದ್ರ, ಮಂಗಳೂರು.
57. ಕ್ರಿಸೆಂಟ್ ಎಜುಕೇಶನ್ ಸೊಸೈಟಿ, ಸಾಗರ.
58. ದಿ ಮೌಂಟಿನ್ ವ್ಯೂ ಹೈಸ್ಕೂಲ್, ಚಿಕ್ಕಮಗಳೂರು.
59. ಸಂತೋಷ್ ಎಜುಕೇಶನ್ ಸಂಸ್ಥೆ, ಬಂಗಾರಪೇಟೆ, ಕೋಲಾರ ಜಿಲ್ಲೆ.
60. ದಿ ನ್ಯೂ ಮುಸ್ಲಿಂ ಎಜುಕೇಶನ್ ಸೊಸೈಟಿ, ಬಿಜಾಪುರ.
61. ಇಸ್ಲಾಮಿಯಾ ಎಜುಕೇಶನ್ ಸಂಸ್ಥೆ, ನಯಾಮೊಹಲ್ಲಾ, ಗುಲ್ಬರ್ಗಾ.
62. ಕೃಪಾದನಮ್ ಹೈಸ್ಕೂಲ್ ಮಂಥೂರ್ ರಸ್ತೆ, ಹುಬ್ಬಳ್ಳಿ, ಧಾರವಾಡ.
63. ಮಧು ಕಂಪೋಸಿಟ್ ಜೂನಿಯರ್ ಕಾಲೇಜ್, ಅರೇಕಲ ಉಳ್ಳಾಲ, ದಕ್ಷಿಣ ಕನ್ನಡ ಜಿಲ್ಲೆ.
64. ಸೇಂಟ್ ಮೇರಿ ಕಾನ್ವೆಂಟ್ ಹೈಸ್ಕೂಲ್, ರಾಯಚೂರು.
65. ಅಲ್ ಮಹಮದ್ ಕಂಪೋಸಿಟ್ ಗರ್ಲ್ಸ್ ಜೂನಿಯರ್ ಕಾಲೇಜು, ಭದ್ರಾವತಿ.
66. ಅಂಜುಮಾನ್ ಟೀಚರ್ಸ್ ಟ್ರೈನಿಂಗ್ ಇನ್ಸ್‌ಟಿಟ್ಯೂಟ್, ರಟ್ಟಿಹಳ್ಳಿ, ಧಾರವಾಡ.
67. ಮೇರಿ ಸಲ್ವನ್ ಸೊಸೈಟಿ, ಸೇಂಟ್ ಮೇರೀಸ್ ಕಾನ್ವೆಂಟ್, ಚಾಮರಾಜಪೇಟೆ, ಬೆಂಗಳೂರು.
68. ಮುಸ್ಲಿಂ ಎಜುಕೇಶನ್ ಅಸೋಸಿಯೇಶನ್, ಮಂಗಳೂರು
    1. ಬದ್ರಿಯಾ ಪ್ರಾಥಮಿಕ ಶಾಲೆ.
    2. ಬದ್ರಿಯಾ ಇಂಗ್ಲೀಷ್ ಹೈಯರ್ ಪ್ರಾಥಮಿಕ ಶಾಲೆ.
    3. ಬದ್ರಿಯಾ ಫ್ರೀ ಯೂನಿವರ್ಸಿಟಿ ಕಾಲೇಜು.
69. ಅಲ್ ಕಬೀರ್ ಎಜುಕೇಶನ್ ಸೊಸೈಟಿ, ಮೈಸೂರು.
    1. ಗರ್ಲ್ಸ್ ಜೂನಿಯರ್ ಕಾಲೇಜು, ಬನ್ನಿಮಂಟಪ, ಮೈಸೂರು.
    2. ಗರ್ಲ್ಸ್ ಹೈಸ್ಕೂಲ್ ಬನ್ನಿಮಂಟಪ
    3. ಉರ್ದು ಮೀಡಿಯಂ ಪ್ರಾಥಮಿಕ ಶಾಲೆ, ಬನ್ನಿಮಂಟಪ.
    4. ಕನ್ನಡ ಮೀಡಿಯಂ ಪ್ರಾಥಮಿಕ ಶಾಲೆ, ಬನ್ನಿಮಂಟಪ.
    5. ಇಂಗ್ಲೀಷ್ ಮೀಡಿಯಂ ಪ್ರಾಥಮಿಕ ಶಾಲೆ ಬನ್ನಿಮಂಟಪ.
    6. ಫ್ರೀ ಪ್ರೈಮರಿ ಶಾಲೆ, ಬನ್ನಿಮಂಟಪ.
70. ಸತ್ಯ ಎಜುಕೇಶನ್ ಸೊಸೈಟಿ, ಶ್ರೀರಾಮಪುರಂ, ಬೆಂಗಳೂರು
71. ಬಿ.ಎಂ. ಪ್ರೈಮರಿ ಮತ್ತು ಸೆಕೆಂಡರಿ ಶಾಲೆ, ಉಳ್ಳಾಲ ಮಂಗಳೂರು, ದ.ಕ. ಜಿಲ್ಲೆ.
72. ಸೇಂಟ್ ಮೇರೀಸ್ ಸಿರಿಯನ್ ಫ್ರೀ ಯುನಿವರ್ಸಿಟಿ ಕಾಲೇಜು ಬ್ರಹ್ಮಾವರ, ದಕ್ಷಿಣ ಕನ್ನಡ ಜಿಲ್ಲೆ
73. ಪಂಚಕ್ರೋಶಿ ಶಿಕ್ಷಣ ಪ್ರಸಾರಕ ಮಂಡಳಿ, ಬುಗಟಿ, ಅಲೂರು, ಹುಕ್ಕೇರಿ, ಬೆಳಗಾಂ ಜಿಲ್ಲೆ. (ಮರಾಠಿ)

74. ಬಾಸೆಲ್ ಮಿಶನ್ ಕಾಂಪೋಸಿಟ್ ಜೂನಿಯರ್ ಕಾಲೇಜು, ಧಾರವಾಡ.

ಕಾಪು ಕ್ಷೇತ್ರಕ್ಕೆ ಒಂದು ವಿದ್ಯುತ್ ವಿತರಣಾ ಕೇಂದ್ರದ ಮಂಜೂರಾತಿ

409 - ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉಡುಪಿ ತಾಲ್ಲೂಕಿನ ಕಾಪು ಕ್ಷೇತ್ರಕ್ಕೆ ಒಂದು ವಿದ್ಯುತ್ ವಿತರಣಾ ಉಪಕೇಂದ್ರ ಮಂಜೂರಾತಿ ಆಗಿದೆಯೇ?

ಆ) ಅದಕ್ಕೆ ಬೇಕಾಗಬಹುದಾದ ಜಮೀನು ಮಂಜೂರಾಗಿದೆಯೇ?

ಇ) ಹಾಗಾದರೆ, ಅದರ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು? (ಯೋಜನಾ ವೆಚ್ಚದ ಮಾಹಿತಿಯನ್ನು ನೀಡುವುದು)

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಉಡುಪಿ ತಾಲ್ಲೂಕಿನ ಕಾಪು ಕ್ಷೇತ್ರದ ಶಿರ್ವ ಎಂಬಲ್ಲಿ ಒಂದು 33:11 ಕೆ.ವಿ. ಉಪ ವಿದ್ಯುತ್ ಕೇಂದ್ರ, ಗ್ರಾಮೀಣ ವಿದ್ಯುದ್ದೀಕರಣ ನಿಗಮದಡಿಯಲ್ಲಿ ಈ ಹಿಂದೆ ಮಂಜೂರಾಗಿತ್ತು. ಆದರೆ ಈ ಉಪ ವಿದ್ಯುತ್ ಕೇಂದ್ರಕ್ಕೆ ಬೇಕಾಗುವ ಭೂಮಿಯನ್ನು ಸ್ವಾಧೀನಪಡಿಸುವಲ್ಲಿ ವಿಳಂಬವಾದುದರಿಂದ ಈ ಯೋಜನೆಯ ಮಂಜೂರಾತಿಯಲ್ಲಿ ಗ್ರಾಮೀಣ ವಿದ್ಯುದ್ದೀಕರಣ ನಿಗಮವು ರದ್ದುಪಡಿಸಿದೆ.

ಆ) ಈಗ, ಅಗತ್ಯವಿರುವ ಜಮೀನು ಮಂಜೂರಾಗಿದೆ.

ಇ) ಸದರಿ ಯೋಜನೆಯ ಪುನರ್ ಮಂಜೂರಾತಿಗಾಗಿ ಗ್ರಾಮೀಣ ವಿದ್ಯುದ್ದೀಕರಣ ನಿಗಮವನ್ನು ಕೋರಿದೆ. ಈ ಯೋಜನೆಗೆ ತಗಲುವ ಅಂದಾಜು ವೆಚ್ಚ 35.0 ಲಕ್ಷ ರೂಪಾಯಿಗಳು.

ಮುಳಬಾಗಲು ತಾಲ್ಲೂಕಿಗೆ ಟ್ರಾನ್ಸ್‌ಫಾರ್ಮರ್‌ಗಳನ್ನು ಒದಗಿಸುವುದು.

412 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಳಬಾಗಿಲು ತಾಲ್ಲೂಕಿಗೆ 66 ಕೆ.ವಿ. ವಿದ್ಯುಚ್ಛಕ್ತಿ ಲೈನು ಸಂಬಂಧ ಕಲ್ಪಿಸಲು ಟ್ರಾನ್ಸ್‌ಫಾರ್ಮರ್‌ಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅಲ್ಲಿ ಬೇಕಾಗುವಷ್ಟು ಟ್ರಾನ್ಸ್‌ಫಾರ್ಮರ್‌ಗಳನ್ನು ಒದಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ – ಎಂ.ರಾಮಪ್ಪ (ಇಂಧನ ರಾಜ್ಯ ಸಚಿವರು) :

ಅ) ಮುಳಬಾಗಿಲಿನಲ್ಲಿ ಹೊಸದಾಗಿ ನಿರ್ಮಾಣ ಮಾಡಿರುವ 66:11 ಕೆ.ವಿ. ಉಪವಿದ್ಯುತ್ ಕೇಂದ್ರದಲ್ಲಿ 8 ಎಂ.ವಿ.ಎ. ಸಾಮರ್ಥ್ಯದ ಒಂದು ಟ್ರಾನ್ಸ್ ಫಾರ್ಮರ್ ನ್ನು ಅಳವಡಿಸಲಾಗಿದ್ದು ಸದರೀ ಟ್ರಾನ್ಸ್ ಫಾರ್ಮರನ್ನು ದಿನಾಂಕ 16-10-1991 ರಂದು ಕಮೀಷನ್ ಮಾಡಲಾಗಿದೆ. ಈ ಉಪವಿದ್ಯುತ್ ಕೇಂದ್ರ ಕಾರ್ಯ ನಿರ್ವಹಿಸುತ್ತಿದೆ.

ಆ) ಪ್ರಶ್ನೆಯ 'ಅ' ಭಾಗಕ್ಕೆ ಮೇಲೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.